# ಮಾದರಿ ಪ್ರಶ್ನೆಪತ್ರಿಕೆ ೮

## ಪ್ರಥಮ ಭಾಷೆ ಕನ್ನಡ ೧೦ ನೇ ತರಗತಿ

**ಗರಿಷ್ಠ ಅಂಕ: ೧೦೦ ಅವಧಿ : 2.45 ಗಂಟೆಗಳು**

## ಭಾಗ -'ಎ'

## ಪಠ್ಯಗಳ ಅಧ್ಯಯನ (ಗದ್ಯ , ಪದ್ಯ, ಪೋಷಕ ಅಧ್ಯಯನ )೬೭ ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೧೧*೧**

೧. ಭೂಮಿಜಾತೆ ಯಾರು?

೨. ಶಬರಿಯು ಯಾರ ಆಶ್ರಮದಲ್ಲಿ ವಾಸವಾಗಿದ್ದಳು ?

೩.ಅಮೆರಿಕದ ವಿದ್ಯಾರ್ಥಿಗಳು ಗೊರೂರರನ್ನು ನೋಡಿ ಯಾವಯಾವ ಹೆಸರಿನಿಂದ ಕೂಗಿದರು ?

೪. ವಿಶ್ವೇಶ್ವರಯ್ಯನವರ ಪೂರ್ವಜರು ಎಲ್ಲಿಯವರು ?

೫. ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮವೇನು ?

೬.ಗಾಂಡೀವಿ ಎಂದು ಅರ್ಜುನನನ್ನು ಕರೆಯಲು ಕಾರಣವೇನು ?

೭. ಯಾವುದಕ್ಕೆ ಸೋಲುವವನು ತಾನಲ್ಲ ಎಂದು ಕರ್ಣನು ಕೃಷ್ಣನಿಗೆ ಹೇಳಿದನು ?

೮. ಮಣ್ಣಿನ ಮಾಲೀಕ ಯಾರು ?

೯.ಸಂಸ್ಕೃತಿಯು ಎಲ್ಲಿ ಹರಿಯಬೇಕು ?

೧೦.ಭರತ ಚಕ್ರವರ್ತಿ ತನ್ನ ಗೆಲುವಿನ ಶಾಸನವನ್ನು ಎಲ್ಲಿ ಬರೆಸಲು ಹೋಗುತ್ತಾನೆ ?

೧೧.ಯಾವುದನ್ನು ತೊರೆದು ಬಾಳಬೇಕು ?

**ಈ ಕೆಳಗಿನವುಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೯*೨ =೧೮**

೧೨.ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?

೧೩.ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು ?

೧೪.ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು ?

೧೫.ಮರವು ಸಾಕ್ಷಿ ನುಡಿದಾಗ ಧರ್ಮಬುದ್ಧಿಯು ಏನೆಂದು ಯೋಚಿಸಿದನು ?

೧೬.ಹೊಸಗಾಲದ ಹಸು ಮಕ್ಕಳನ್ನು ಹಕ್ಕಿಯು ಹೇಗೆ ಹರಸಿದೆ ?

೧೭. ಹಕ್ಕಿಯ ರೂಪವನ್ನು ವರ್ಣಿಸಿ.

mamatabhagwat1@gmail.com

೧೮.ಸಂಕಟಕೆ ಗಡಿ ಇಲ್ಲ ಏಕೆ ?

೧೯.ವೈಜ್ಞಾನಿಕ ಮನೋಧರ್ಮದ ಅಗತ್ಯತೆಯನ್ನು ಎಚ್ .ನರಸಿಂಹಯ್ಯ ಹೇಗೆ ವಿವರಿಸಿದ್ದಾರೆ ?

೨೦.ಕೊಕ್ಕರೆಯ ಕುರಿತಾದ ಜನಪದ ಒಗಟನ್ನು ವಿವರಿಸಿ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪*೩=೬**

೨೧. ''ನಾವು ಮನುಷ್ಯರು ''

೨೨. ''ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿ ಬಾ''

೨೩. ''ಪಗೆಗೆ ಕಣೆಯೋದೊಂಟೇ ''

೨೪. ''ಹೊಡೆದರೂ ಗುಂಡ ಕರುಣ ಇಲ್ಲದಂಗ ''

**ಈ ಸಾಹಿತಿಗಳ ಸ್ಥಳ ,ಕಾಲ, ಕೃತಿಗಳನ್ನು ಕುರಿತು ಬರೆಯಿರಿ. ೨*೩=೬**

೨೫. ಡಿ ಎಸ್ ಜಯಪ್ಪ ಗೌಡ

೨೬.ಕುಮಾರವ್ಯಾಸ

**೨೭.ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ೧*೪=೪**

ಕಲುಷಿತ--------- –

-----------------------------

----------------------

-----------------------

------------ಮುಟ್ಟೋಣ

ಅಥವಾ

ಮತಗಳೆಲ್ಲವೂ--------------

--------------------------

----------------------

-------------------- ಬಿತ್ತೋಣ

**೨೮.ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**೪*೧=೪**

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ?

ಹೊಸ್ತಿಲಲ್ಲಿ ಹುಲ್ಲು ಹುಟ್ಟಿ,ಮನೆಯೊಳಗೆ ರಜ ತುಂಬಿ,

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ ?

mamatabhagwat1@gmail.com

ತನುವಿನೊಳಗೆ ಹುಸಿ ತುಂಬಿ,ಮನದೊಳಗೆ ವಿಷಯ ತುಂಬಿ

ಮನೆಯೊಳಗೆ ಮನೆಯೊಡೆಯನಿಲ್ಲಾ

ಕೂಡಲಸಂಗಮದೇವಾ

ಪ್ರಶ್ನೆಗಳು :

೧.ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ ಎಂದು ಅನ್ನಿಸಲು ಕಾರಣವೇನು

೨.ಮನೆಯೊಳಗೆ ಮನೆಯೊಡೆಯನಿಲ್ಲ ಎಂದು ಬಸವಣ್ಣನವರು ಹೇಳಲು ಕಾರಣವೇನು?

೩.ಮನೆಯೊಳಗೆ ಮನೆಯೊಡೆಯನಿರುವನೆನಿಸಲು ಹೇಗಿರಬೇಕು ?

೪.ಈ ನುಡಿಯಿಂದ ನೀವು ತಿಳಿದ ನೀತಿಯೇನು ?

## ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨*೪=೮

೨೯. ಹುಲಿಯ ಬೇಟೆಯಾಡುವ ವಿಷಯದ ಕುರಿತಾದ ಎ.ಎನ್. ಮೂರ್ತಿರಾವ್ ಅವರ ಅಭಿಪ್ರಾಯವನ್ನು ವಿವರಿಸಿ.

ಅಥವಾ

ಹುಲಿಯಿಂದ ತಪ್ಪಿಸಿಕೊಳ್ಳಲು ಶಾನುಭೋಗರು ಮಾಡಿದ ಉಪಾಯ ವಿವರಿಸಿ.

೩೦. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು ?

ಅಥವಾ

ವೀರಲವ ಪದ್ಯಭಾಗದಲ್ಲಿ ವ್ಯಕ್ತವಾದ ಲವನ ವ್ಯಕ್ತಿತ್ವವನ್ನು ವಿವರಿಸಿ.

## ೩೧. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.. ೪=೨+೨

ಸಾಮಾಜಿಕ ಪುನರ್ಘಟನೆಯಲ್ಲಿ ರಶ್ಯದ ಸಮತಾವಾದವೂ ಭಾರತದ ಆಧ್ಯಾತ್ಮವಾದವೂ ರೂಪುಗೊಂಡು ಬೆರೆಯಬೇಕಾಗಿದ್ದಂತೆ ಇಂದಿನ ಓರ್ವ ವ್ಯಕ್ತಿಯ ಜೀವನದಲ್ಲಿ ಆಂತರಿಕ ದೃಷ್ಟಿಯ ಹಾಗು ಅನ್ಯರ  ಹಿತದೃಷ್ಟಿಗಳ ಪ್ರಜ್ಞೆಯ ಸಮ್ಮಿಲನವಾಗಬೇಕಾಗಿದೆ.ರಸವೇ ಜೀವನ .ರಸದ ಸೂಕ್ಷ್ಮತೆ ವಿಶಾಲತೆಗಳ ವ್ಯತ್ಯಯರಹಿತ ವಿಕಾಸವೇ ವ್ಯಕ್ತಿಜೀವನ .ಸಮರಸವೇ ಸಹಜೀವನ. ಬರಿ ಸ್ವಾನುಭೂತಿಯಿಂದ ಸಾಗುವ ಜೀವನರಥಕ್ಕೆ ಒಗ್ಗಾಲಿಯ ಭೀತಿಯಿದೆ.ಸಹಾನುಭೂತಿಯೂ ಅದರ ಜೋಡಣೆಗೆ ಅವಶ್ಯವಾದುದು.ಇಂಥ

ಸಹಾನುಭೂತಿಗಾಗಿ ಎರಡು ಕಣ್ಣು ಯಾವಾಗಲೂ ತೆರೆದಿಡಬೇಕಾಗುತ್ತವೆ ; ಒಂದು ತನ್ನಿಂದ ಹೆರವರಿಗೆ ಯಾವ ತೊಂದರೆಯೂ ಮಾನಸಿಕ ವ್ಯಥೆಯೂ ಆಗದಂತೆ ಎಚ್ಚರಪಡುವ ಕಣ್ಣು ;ಇನ್ನೊಂದು ತನ್ನ ಅಳವಿನಲ್ಲಿ ಹೆರವರ ಐಹಿಕ ,ಮಾನಸಿಕ ಇಲ್ಲವೆ ಆತ್ಮಿಕ ಹಿತಚಿಂತನೆ ಎಲ್ಲೆಲ್ಲಿ ಸಾಧ್ಯ ಎಂದು ಸದಾ ಅಭ್ಯಸಿಸುವ ಕಣ್ಣು.ಅಂತೇ ದೇವರು ಸಾರತಃ ದೃಷ್ಟಿಯಲ್ಲಿ ಒಂದೇ ಆದ ಎರಡು ಕಣ್ಣುಗಳನ್ನು ಮಾನವನಿಗೆ ಕೊಟ್ಟು ಅವನ ಆಂತರಿಕ ವಿಕಾಸಕ್ಕಾಗಿ ಆಜ್ಞಾಚಕ್ರದಲ್ಲಿಯೇ ಒಳಗಣ್ಣನ್ನು ಕೊಟ್ಟಿದ್ದಾನೆ .

ಪ್ರಶ್ನೆಗಳು :

೧. ಸಹಾನುಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳು ಯಾವುವು ?

೨.ಸಮರಸವೇ ಸಹಜೀವನ ವಿವರಿಸಿ.

## ಭಾಗ – 'ಬಿ'

## ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು-೨೦ ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ ೧೦*೧=೧೦**

೩೨. 'ಭೂಮಿಜಾತೆ ' ಪದವು ಈ ಸಮಾಸದ ಉದಾಹರಣೆಯಾಗಿದೆ.....

ಎ)ಕರ್ಮಧಾರಯ ಸಮಾಸ ಬಿ)ಕ್ರಿಯಾ ಸಮಾಸ ಸಿ)ಬಹುವ್ರೀಹಿಸಮಾಸ ಡಿ)ಗಮಕ ಸಮಾಸ

೩೩. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ-----

ಎ)೯ ಬಿ)೧೦ ಸಿ)೧೧ ಡಿ)೨೫

೩೪. 'ಅಹುದಹುದು' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ...

ಎ) ದ್ವಿರುಕ್ತಿ ಬಿ)ನುಡಿಗಟ್ಟು ಸಿ)ಜೋಡುನುಡಿ ಡಿ)ಅನುಕರಣಾವ್ಯಯ

೩೫. ಈ ಕೆಳಗಿನವುಗಳಲ್ಲಿ ಆತ್ಮಾರ್ಥಕ ಸರ್ವನಾಮವಿದು.---

ಎ) ನಾವು ಬಿ)ತನ್ನ ಬಿ)ನೀವು ಡಿ)ಅವರು

೩೬. 'ನೆನಪು' ಪದದಲ್ಲಿರುವ ವ್ಯಾಕರಣಾಂಶವಿದು ----

ಎ)ಕೃದಂತಾವ್ಯಯ ಬಿ)ಕೃದಂತ ಭಾವನಾಮ ಸಿ)ಕೃದಂತನಾಮ ಡಿ)ತದ್ಧಿತಾಂತನಾಮ

೩೭. ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುತ್ತದೆ. ಈ ವಾಕ್ಯವು ವಾಕ್ಯದ ಈ ಪ್ರಕಾರಕ್ಕೆ ಸೇರಿದೆ.....

ಎ) ಸಾಮಾನ್ಯವಾಕ್ಯ ಬಿ)ಸಂಯೋಜಿತವಾಕ್ಯ ಸಿ)ನಿಷೇಧಾರ್ಥಕವಾಕ್ಯ ಡಿ)ಮಿಶ್ರವಾಕ್ಯ

೩೮. ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಚಿಹ್ನೆಯನ್ನು ಬಳಸುವರು....

ಎ)ಉದ್ಧರಣ ಬಿ)ವಾಕ್ಯವೇಷ್ಠನ ಸಿ)ಪೂರ್ಣವಿರಾಮ ಡಿ)ಅರ್ಧವಿರಾಮ

೩೯.'ವೃದ್ಧಿಯಾಗಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ....

ಎ) ಆದೇಶ ಸಂಧಿ ಬಿ)ಆಗಮ ಸಂಧಿ ಸಿ)ಗುಣಸಂಧಿ ಡಿ)ಸವರ್ಣದೀರ್ಘ ಸಂಧಿ

೪೦. 'ರಾಯ' ಪದದ ತತ್ಸಮ ರೂಪವಿದು –---

ಎ)ರಾಯಾ ಬಿ)ಅರಸ ಸಿ)ರಾಜ ಡಿ)ದೊರೆ

೪೧. 'ದೂರವಾಗುತ್ತದೆ' ಈ ಕ್ರಿಯಾಪದದ ಸಂಭಾವನಾರ್ಥಕ ರೂಪವಿದು....

ಎ)ದೂರವಾಗಲಿ ಬಿ)ದೂರವಾದೀತು ಸಿ)ದೂರವಾಯಿತು ಡಿ) ದೂರವಾಗದು

## ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ.೪*೧=೪

೪೨. ಪೊನ್ನು : ಹೊನ್ನು : : ಪೋದರ್ : ___

೪೩. ಒಂದ್ಸಲ : ಒಂದು ಸಲ : : ನಿಲ್ಸಿ : ____

೪೪. ಮೇಜು : ಪೋರ್ಚುಗೀಸ್ : : ಲೈಟು :-----

೪೫. ಶಾಲೆ : ರೂಢನಾಮ : : ಶಿಕ್ಷಕ : ----

## ೪೬. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸಿನ ಹೆಸರು ಬರೆಯಿರಿ.೧*೩=೩

ಬ್ಜೋದರಕಾಯಕಾಂತಿ ಶಿತಿಕಂಠಗಳಪ್ರತಿಮಪ್ರಭಂ ತಮಂ

ಅಥವಾ

ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ

## ೪೭.ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ,ಲಕ್ಷಣದೊಂದಿಗೆ ಸಮನ್ವಯಿಸಿ.೧*೩

'ಅಂದಣವನೇರಿದ ಸೊಣಗನಂತೆ '

ಅಥವಾ

'ಮನೆಯೊಳ್ ಕಿಚ್ಚನಿಕ್ಕುವಂತೆ'

## ಭಾಗ -'ಸಿ'

## ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ ೧೩ ಅಂಕಗಳು.

೪೮. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.
೧*೩=೩

೧.ಬೆಳ್ಳಗಿರೋದೆಲ್ಲ ಹಾಲಲ್ಲ ; ಹೊಳೆಯುವುದೆಲ್ಲ ಚಿನ್ನವಲ್ಲ.

೨.ಕೈ ಕೆಸರಾದರೆ ಬಾಯಿ ಮೊಸರು

೩.ಮಾತುಬೆಳ್ಳಿ; ಮೌನ ಬಂಗಾರ

೪೯.ನಿಮ್ಮ ಶಾಲೆಯಲ್ಲಿ ಆಚರಿಸಿದ ಎಂಜನಿಯರ್ ದಿನಾಚರಣೆಯ ವರದಿಯನ್ನು ಪ್ರಕಟಿಸುವಂತೆ ಕೋರಿ ಸ್ಥಳೀಯ ದಿನಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯಿರಿ.
೧*೫=೫

ಅಥವಾ

ನಿಮ್ಮನ್ನು ಬೆಳಗಾವಿಯ ನಿವಾಸಿ ಹರಿಪ್ರಿಯಾ /ಚರಣ್ ಎಂದು ಭಾವಿಸಿ  ಬೆಂಗಳೂರಿನಲ್ಲಿ ವಾಸವಾಗಿರುವ ನಿಮ್ಮ ಸಹೋದರ 'ಮಧುಕುಮಾರ'ನಿಗೆ  ನಿಮ್ಮವಿದ್ಯಾಭ್ಯಾಸದ ಪ್ರಗತಿ ತಿಳಿಸಿ ಪತ್ರ ಬರೆಯಿರಿ.

೫೦. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.೧*೫=೫

೧.ಸ್ವಾತಂತ್ರ್ಯ ದಿನಾಚರಣೆಯ ಮಹತ್ವ

೨. ಗ್ರಂಥಾಲಯಗಳ ಮಹತ್ವ

೩.ನೆರೆಹಾವಳಿ ಮತ್ತು ಪರಿಹಾರೋಪಾಯಗಳು